## ಮಿರಿಡ್ ತಿಗಣೆ: ಹತ್ತಿಯ ರಸ ಹೀರುವ ಪ್ರಮುಖ ನೂತನ ಕೀಟ



### ಜೀವನ ಚರಿತ್ರೆ :

ಪ್ರೌಢ ಮಿರಿಡ್ ತಿಗಣೆಯು ತಿಳಿ ಹಳದಿ ಅಥವಾ ಕಂದು ಬಣ್ಣ ಹೊಂದಿರುತ್ತದೆ. ಪ್ರತಿ ಹೆಣ್ಣು ತಿಗಣೆಯು ಒಂದು ವಾರದ ಅವಧಿಯಲ್ಲಿ ಸುಮಾರು 70–170 ಮೊಟ್ಟೆಗಳನ್ನು ಎಲೆಯ ಒಳಭಾಗದಲ್ಲಿ ಇಡುತ್ತದೆ. ಮೊಟ್ಟೆಗಳು ಬಿಳಿ ಅಥವಾ ಕಿತ್ತಳೆ ಬಣ್ಣದಿಂದ ಕೂಡಿದ್ದು, ಹವಾಮಾನಕ್ಕೆ ಅನುಗುಣವಾಗಿ 5 ರಿಂದ 7 ದಿನಗಳಲ್ಲಿ ಒಡೆದು ಮರಿಗಳು ಹೊರಗೆ ಬರುತ್ತವೆ. ಮರಿಗಳು ಹಸಿರು ಬಣ್ಣ ಹೊಂದಿದ್ದು ಕಂದು ಬಣ್ಣದ ಕುಡಿ ರೆಕ್ಕೆಗಳನ್ನು ಹೊಂದಿರುತ್ತವೆ. ಇವು 12–18 ದಿನಗಳಲ್ಲಿ 5 ಹಂತಗಳನ್ನು ದಾಟಿ ಪ್ರೌಢಾವಸ್ಥೆ ತಲುಪುತ್ತವೆ.

### ಬಾಧೆಯ ಲಕ್ಷಣಗಳು:

ಕಳೆದೆರಡು ವರ್ಷಗಳಿಂದ ಈ ಕೀಟದ ಬಾಧೆಯು ಉತ್ತರ ಕರ್ನಾಟಕದ ಹತ್ತಿ ಬೆಳೆಯುವ ಪ್ರದೇಶದಲ್ಲಿ ಅಧಿಕ ಪ್ರಮಾಣದಲ್ಲಿ ಕಂಡು ಬರುತ್ತಿದೆ. ಈ ಕೀಟದ ಬಾಧೆಯು ಹತ್ತಿ ಬೆಳೆಯು ಮೊಗ್ಗುಗಳನ್ನು ಬಿಟ್ಟ ನಂತರ ಪ್ರಾರಂಭವಾಗುತ್ತದೆ. ಪ್ರೌಢ ಹಾಗೂ ಮರಿ ತಿಗಣೆಗಳು ಹತ್ತಿಯ ಮೊಗ್ಗುಗಳಲ್ಲಿ ಆಶ್ರಯ ಪಡೆದು, ರಸ ಹೀರಿ, ತಮ್ಮ ಜೀವನ ಕ್ರಮವನ್ನು ಮುಂದುವರೆಸುತ್ತವೆ. ಹೀಗೆ ರಸ ಹೀರಿದ ಮೊಗ್ಗುಗಳು ಒಂದೆರಡು ದಿವಸಗಳಲ್ಲಿ ಉದುರಿ ಹೋಗುತ್ತವೆ. ಈ ತಿಗಣೆಗಳು ಎಳೆಯ ಕಾಯಿಗಳಿಂದಲೂ ರಸ ಹೀರುವುದರಿಂದ ಈ ಕಾಯಿಗಳ ಬೆಳೆವಣಿಗೆ ಕುಂಠಿತಗೊಂಡು ನಂತರ ಉದುರುತ್ತವೆ.  ಅಲ್ಲದೇ ಕೆಲವೊಮ್ಮೆ ಬಲಿತ ಕಾಯಿಗಳಿಂದಲೂ ಈ ತಿಗಣೆಗಳು ರಸ ಹೀರುವುದರಿಂದ ಮೊದಲ ಹಂತದಲ್ಲಿ ಕಪ್ಪು ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ತದನಂತರ ಬಾಧೆಗೊಳಗಾದ ಕಾಯಿಗಳು ಗಿಳಿಯ ಮೂಗಿನ ಆಕಾರವನ್ನು ಹೊಂದುತ್ತವೆ. ಇಂತಹ ಕಾಯಿಗಳು ಬಲಿತು ಇರುಕಲಾಗಿ ಒಡೆಯುತ್ತವೆ. ಇಂತಹ ಕಾಯಿಗಳಿಂದ ದೊರಕುವ ಹತ್ತಿಯು ಕಡಿಮೆ ಗುಣಮಟ್ಟದ್ದಾಗಿದ್ದು ಉತ್ತಮ ಬೆಲೆ ಸಿಗುವುದಿಲ್ಲ. ಪ್ರತಿ ಗಿಡಕ್ಕೆ 5–10 ತಿಗಣೆಗಳಿಗಿಂತ ಹೆಚ್ಚಾದಲ್ಲಿ ಇಳುವರಿ ಗಣನೀಯ ಪ್ರಮಾಣದಲ್ಲಿ ಕುಂಠಿತಗೊಳ್ಳುತ್ತದೆ.

### ನಿರ್ವಹಣಾ ಕ್ರಮಗಳು:

ಈ ಕೀಟದ ಬಾಧೆ ಕಂಡುಬಂದಲ್ಲಿ ಅಸಿಫೇಟ್ 70 ಎಸ್. ಪಿ. 1.0 ಗ್ರಾಂ ಅಥವಾ ಇಮಿಡಾಕ್ಲೋಪ್ರಿಡ್ 200 ಎಸ್.ಎಲ್. 0.2 ಎಂ.ಎಲ್. ಅಥವಾ ಅಸಿಟಾಮಿಪ್ರಿಡ್ 20 ಎಸ್.ಪಿ. 0.15 ಗ್ರಾಂ ಅಥವಾ ಬೇವು ಜನ್ಯ ಕೀಟನಾಶಕಗಳಾದ ಶೇ. 5 ರ ಬೇವಿನ ಬೀಜದ ಕಷಾಯ ಅಥವಾ ಶೇ. 5 ರ ಬೇವು ಆಧಾರಿತ ಕೀಟನಾಶಕ ಇವುಗಳಲ್ಲಿ ಯಾವುದಾದರೊಂದು ಕೀಟನಾಶಕವನ್ನು ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದರಿಂದ ಮಿರಿಡ್ ತಿಗಣೆಯನ್ನು ನಿರ್ವಹಣೆ ಮಾಡಬಹುದು.

## ಪ್ರಸ್ತುತ ತ್ರೈಮಾಸಿಕದಲ್ಲಿ ಕೃಷಿ ವಿಜ್ಞಾನ ಕೇಂದ್ರದಿಂದ ಕೈಗೊಳ್ಳಲಾಗುವ ಕಾರ್ಯಕ್ರಮಗಳು

### ತರಬೇತಿ

1. ಎಣ್ಣೆಕಾಳು ಬೆಳೆಗಳ ಸುಧಾರಿತ ಉತ್ಪಾದನಾ ತಾಂತ್ರಿಕತೆಗಳು
2. ವೈಜ್ಞಾನಿಕ ನೀರು ನಿರ್ವಹಣೆ
3. ಎರೆಹುಳು ಗೊಬ್ಬರ ಉತ್ಪಾದನಾ ತಾಂತ್ರಿಕತೆ

### ಕ್ಷೇತ್ರೋತ್ಸವ

1. ಹೆಸರು ತಳಿ (ಎಸ್–4)

### ಪ್ರಕಟಣೆ

**ಕೃಷಿ ಮೇಳ – ದಿನಾಂಕ 10 ರಿಂದ 13 ಸೆಪ್ಟೆಂಬರ್, 2009 ರವರೆಗೆ ಕೃಷಿ ನಗರ , ಕೃಷಿ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಆಯೋಜಿಸಲಾಗಿದೆ.** ಕೃಷಿ ಮೇಳದ ಅಂಗವಾಗಿ ಜಿಲ್ಲೆಯ ಶ್ರೇಷ್ಠ ಕೃಷಿಕ ಮತ್ತು ಕೃಷಿ ಮಹಿಳೆ ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ದಿನಾಂಕ 25.08.09 ರ ಒಳಗೆ ಕೃಷಿ ವಿಜ್ಞಾನ ಕೇಂದ್ರದಲ್ಲಿ ಸಲ್ಲಿಸಲು ಕೋರಲಾಗಿದೆ.

**ಆಂತರಿಕ ಪ್ರಸಾರಕ್ಕಾಗಿ ಮಾತ್ರ**

ಮುದ್ರಿತ ವಿಷಯ

ಗೆ,

______________________

______________________

______________________

**ಪಿನ್ ಕೋಡ್** | | | | | | |

ಇಂದ:
**ಕಾರ್ಯಕ್ರಮ ಸಂಯೋಜಕರು**
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ-581 135
ತಾ॥ ರಾಣೇಬೆನ್ನೂರು, ಜಿ॥ ಹಾವೇರಿ,
ದೂರವಾಣಿ:08373-253524, 9448495338
E-mail: kvk_haveri@rediffmail.com
Website :www.kvkhaveri.org
(ನಿಮ್ಮ ಅನಿಸಿಕೆಗಳನ್ನು ಈ ವಿಳಾಸಕ್ಕೆ ಕಳುಹಿಸಿ)

ಸಂಪಾದಕರು : ಡಾ. ಟಿ.ಎಂ. ಸೌಮ್ಯ
ಪ್ರಕಾಶಕರು : ಡಾ. ಎಂ.ವಿ. ನಾಗರಾಜ
ಕಾರ್ಯಕ್ರಮ ಸಂಯೋಜಕರು
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ
ಸಹ ಸಂಪಾದಕರು : ಡಾ. ಕೆ. ಬಿ. ಯಡಹಳ್ಳಿ, ಡಾ. ಬಿ. ಸಿ. ಹನುಮಂತಸ್ವಾಮಿ,
ಡಾ. ಎಸ್. ಎಂ. ಹಿರೇಮಠ, ಶ್ರೀ ಎಂ.ಎ. ಗದ್ದನಕೇರಿ,
ಶ್ರೀ ವೆಂಕಟೇಶ ಹೊಸಮನಿ
ಅಕ್ಷರ ಜೋಡಣೆ ಮತ್ತು ವಿನ್ಯಾಸ : ಕು. ರೇಖಾ ಕೆ.ಎನ್.



ಕೃಷಿ ವಿಶ್ವವಿದ್ಯಾಲಯ, ಧಾರವಾಡ

# ವಾರ್ತಾ ಪತ್ರಿಕೆ

ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ

Website: www. kvkhaveri.org
Email:kvk_haveri@rediffmail.com

ಏಪ್ರಿಲ್– ಜೂನ್, 2009 ಸಂಪುಟ–6 ಸಂಚಿಕೆ–2

## ಭೂಚೇತನ ಕಾರ್ಯಕ್ರಮ



ಸನ್ಮಾನ್ಯ ಶ್ರೀ ಡಾ. ಬಿ.ಎಸ್. ಯಡಿಯೂರಪ್ಪ, ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು ಇವರು "ಭೂಚೇತನ" ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡಿರುವುದು.



ಡಾ. ದೇವ್ ಓಷಿಂಗ್ಟನ್, ಉಪನಿರ್ದೇಶಕರು, ಇಕ್ರಿಸ್ಯಾಟ್, ಹೈದ್ರಾಬಾದ್ ಇವರು ಕೃ.ವಿ.ವಿ.ಧಾರವಾಡದ ಕೃಷಿ ವಸ್ತುಪ್ರದರ್ಶನ ಮಳಿಗೆಯನ್ನು ಉದ್ಘಾಟಿಸುತ್ತಿರುವುದು.

ಕೃಷಿ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ಅಂತರಾಷ್ಟ್ರೀಯ ಅರೆ ಒಣ ಉಷ್ಣವಲಯದ ಬೆಳೆಗಳ ಸಂಶೋಧನಾ ಸಂಸ್ಥೆ (ಇಕ್ರಿಸ್ಯಾಟ್), ಹೈದ್ರಾಬಾದ್ ಇವರ ಸಂಯುಕ್ತ ಆಶ್ರಯದಲ್ಲಿ ಹಾವೇರಿಯಲ್ಲಿ ಆಯೋಜಿಸಲಾಗಿದ್ದ ಖುಷ್ಕಿ ಬೇಸಾಯದಲ್ಲಿ ತಾಂತ್ರಿಕ ಅಳವಡಿಕೆ ಹಾಗೂ ಉತ್ಪಾದನೆ ವರ್ಧಿಸುವ ಯೋಜನೆ–"ಭೂ–ಚೇತನ" ಕಾರ್ಯಕ್ರಮವನ್ನು ದಿನಾಂಕ 23.05.09 ರಂದು ಸನ್ಮಾನ್ಯ ಶ್ರೀ ಡಾ. ಬಿ. ಎಸ್. ಯಡಿಯೂರಪ್ಪ, ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು ಇವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಡಾ. ಎಸ್. ಎ. ಪಾಟೀಲ್, ಅಧ್ಯಕ್ಷರು, ಕೃಷಿ ಮಿಷನ್, ಡಾ. ಜೆ. ಎಚ್. ಕುಲಕರ್ಣಿ, ಕುಲಪತಿಗಳು ಹಾಗೂ ಡಾ. ಆರ್. ಆರ್. ಹಂಚಿನಾಳ, ಕೃಷಿ ವಿಸ್ತರಣಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ ಧಾರವಾಡ ಮತ್ತು ಡಾ. ದೇವ್ ಓಷಿಂಗ್ಟನ್, ಉಪನಿರ್ದೇಶಕರು, ಇಕ್ರಿಸ್ಯಾಟ್, ಹೈದ್ರಾಬಾದ್ ಇವರು ಪಾಲ್ಗೊಂಡಿದ್ದರು. ಭೂ ಚೇತನ ಕಾರ್ಯಕ್ರಮದಡಿಯಲ್ಲಿ ಹಾವೇರಿ ಜಿಲ್ಲೆಯ 3 ತಾಲೂಕುಗಳಲ್ಲಿ (ಹಿರೇಕೆರೂರು, ರಾಣೇಬೆನ್ನೂರು ಮತ್ತು ಹಾವೇರಿ) ಮೆಕ್ಕೆಜೋಳ ಹಾಗೂ 2 ತಾಲೂಕುಗಳಲ್ಲಿ (ಸವಣೂರು ಮತ್ತು ಶಿಗ್ಗಾಂವ) ಶೇಂಗಾ ಬೆಳೆಯ ಉತ್ಪಾದಕತೆಯನ್ನು ಲಘುಪೋಷಕಾಂಶ ಹಾಗೂ ಜೈವಿಕ ಗೊಬ್ಬರಗಳ ಬಳಕೆಯಿಂದ ಶೇ. 20 ರಷ್ಟು ಹೆಚ್ಚಿಸಲು ಕರೆ ನೀಡಲಾಯಿತು.

## ಕಿಯೋಸ್ಕ್ : ಸ್ವಯಂಚಾಲಿತ ಕೃಷಿ ಮಾಹಿತಿ ಕೇಂದ್ರ

ಆಧುನಿಕ ಕೃಷಿ ಪದ್ಧತಿಯ ಅನುಸರಣೆಯಲ್ಲಿ ರೈತರಿಗೆ ಬೇಕಾದ ಕೃಷಿ ತಂತ್ರಜ್ಞಾನ, ಮಾರುಕಟ್ಟೆ ಮಾಹಿತಿ ಹಾಗೂ ಇನ್ನಿತರ ಬೇಸಾಯಕ್ಕೆ. ಅವಶ್ಯಕವಾದ ಮಾಹಿತಿಗಳನ್ನು ರೈತರಿಗೆ ಒದಗಿಸಲು ಹಾಗೂ ಅವರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಪ್ರಬಲವಾದ ಕೃಷಿ ವಿಸ್ತರಣಾ ಸೇವೆಯು ಅತ್ಯವಶ್ಯಕ. ಈ ದಿಸೆಯಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಪ್ರಾಯೋಜಕತ್ವದಲ್ಲಿ ಕಿಯೋಸ್ಕ್: ಸ್ವಯಂ ಚಾಲಿತ ಕೃಷಿ ಮಾಹಿತಿ ಕೇಂದ್ರಗಳನ್ನು ಕೃಷಿ ವಿಸ್ತರಣಾ ಸೇವೆಯಲ್ಲಿ ರೈತರಿಗೆ ನೇರವಾಗಿ ಬಳಸಲು ಅನುಕೂಲ ಕಲ್ಪಿಸಲಾಗಿದೆ.

ಕಿಯೋಸ್ಕ್ ಮೂಲತಃ ಒಂದು ಕಂಪ್ಯೂಟರ್ ಆಧಾರಿತ ಯಂತ್ರ. ಈ ಯಂತ್ರವನ್ನು ಬಹುವಾಗಿ ಬ್ಯಾಂಕಿಂಗ್, ಇಂಟರ್‌ನೆಟ್, ಸೇವಾ ವಲಯ, ಡಿಜಿಟಲ್ ಮಿನಿ ಲ್ಯಾಬ್, ಮಾರಾಟ ವಲಯ, ಭದ್ರತಾ ವ್ಯವಸ್ಥೆ ಮುಂತಾದ ಉದ್ದೇಶಗಳು ಹಾಗೂ ಬೋರ್ಡಿಂಗ್ ಪಾಸ್ ವಿತರಣೆಯಂತಹ ಕಾರ್ಯಗಳಲ್ಲಿ ಯಶಸ್ವಿಯಾಗಿ ಬಳಸಿಕೊಳ್ಳಲಾಗುತ್ತಿದೆ.

ಜಿಲ್ಲೆಯ ಕೃಷಿ ವಿಜ್ಞಾನ ಕೇಂದ್ರ, ವಿಸ್ತರಣಾ ಶಿಕ್ಷಣ ಘಟಕ, ತಾಲೂಕು ಮಟ್ಟದ ಸಹಾಯಕ ಕೃಷಿ ನಿರ್ದೇಶನಾಲಯಗಳು, ಜಿಲ್ಲಾ ಕೃಷಿ ನಿರ್ದೇಶನಾಲಯ, ಜಿಲ್ಲಾ ತೋಟಗಾರಿಕಾ ಕಛೇರಿಗಳು, ಕೃಷಿ ಹುಟ್ಟುವಳಿ ಮಾರಾಟ ಸಮಿತಿ ಹಾಗೂ ಆಯ್ದ ರೈತ ಸಂಪರ್ಕ ಕೇಂದ್ರಗಳಿಗೆ ಕಿಯೋಸ್ಕ್‌ಗಳನ್ನು ಪೂರೈಸಲಾಗಿದೆ.

ರೈತರ ಬೆರಳ ತುದಿಯಲ್ಲೇ ಕೃಷಿ ತಂತ್ರಜ್ಞಾನ ಒದಗಿಸಿ ಅವರ ಮನೆ ಬಾಗಿಲಿಗೆ ತಾಂತ್ರಿಕ ಮಾಹಿತಿಯನ್ನು ಕೊಂಡೊಯ್ಯುವ "ಇ" ಯೋಜನೆಯನ್ನು ರೂಪಿಸಲಾಗಿದ್ದು, ಈ ಯೋಜನೆಯ ಮೂಲಕ ಕೃಷಿ, ತೋಟಗಾರಿಕೆ, ಪಶು ಸಂಗೋಪನೆ ಕುರಿತ ಮಾಹಿತಿ, ಅಧಿಕ ಇಳುವರಿಗೆ ಆಧುನಿಕ ಬೇಸಾಯ ಕ್ರಮಗಳು, ಬೀಜೋತ್ಪಾದನೆ ತಾಂತ್ರಿಕತೆಗಳು, ಮಾರುಕಟ್ಟೆ ಮಾಹಿತಿ, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ, ವಾತಾವರಣದ ಬಗ್ಗೆ ಮುನ್ಸೂಚನೆ, ಉತ್ತಮ ತಳಿ ಹಾಗೂ ಸಂಕರಣ ತಳಿಗಳ ಮಾಹಿತಿ, ವಲಯವಾರು ಕೃಷಿ ಮಾಹಿತಿ, ಬೆಳೆಗಳನ್ನು ಬಾಧಿಸುವ ಕೀಟ ಹಾಗೂ ರೋಗಗಳು, ಅವುಗಳ ನಿರ್ವಹಣೆ, ಮುನ್ಸೂಚನೆ ಸೇರಿದಂತೆ ವಿವಿಧ ಮಾಹಿತಿಗಳನ್ನು ಒಂದೇ ಕಿಯೋಸ್ಕ್‌ನಲ್ಲಿ ಹಾಗೂ ರೈತರ ಬೆರಳ ತುದಿಯಲ್ಲಿ ಮುಕ್ತವಾಗಿ ಲಭ್ಯವಾಗುವಂತೆ ಅನುಕೂಲ ಮಾಡಿಕೊಡಲಾಗಿದೆ.



ಡಾ. ಆರ್. ಎ. ಬೂದಿಹಾಳ್, ಸಲಹೆಗಾರರು, "ಆತ್ಮಾ" ಯೋಜನೆ, ಬೆಂಗಳೂರು ಇವರು ಕಿಯೋಸ್ಕ್‌ನ ಕಾರ್ಯವೈಖರಿಯನ್ನು ವೀಕ್ಷಿಸಿದರು

## ತರಬೇತಿ ಕಾರ್ಯಕ್ರಮ

ಜಿಲ್ಲಾ ಕೃಷಿ ತರಬೇತಿ ಕೇಂದ್ರ, ದೇವಿಹೊಸೂರು, ಹಾವೇರಿ ಜಿಲ್ಲೆ ಇಲ್ಲಿ ಕೃಷಿ ಅಧಿಕಾರಿಗಳು, ಸಹಾಯಕ ಕೃಷಿ ಅಧಿಕಾರಿಗಳು, ಕೃಷಿ ಸಹಾಯಕರು ಹಾಗೂ ರೈತ ಅನುವುಗಾರರಿಗೆ ದಿನಾಂಕ 11.05.09 ರಂದು ಹಮ್ಮಿಕೊಳ್ಳಲಾಗಿದ್ದ **"ಮೆಕ್ಕೆ ಜೋಳ ಮತ್ತು ಶೇಂಗಾ ಉತ್ಪಾದನೆ ತಾಂತ್ರಿಕತೆ"** ತರಬೇತಿ ಕಾರ್ಯಕ್ರಮದಲ್ಲಿ ಕೇಂದ್ರದ ವಿಜ್ಞಾನಿಗಳು ಪಾಲ್ಗೊಂಡಿದ್ದರು.

## ಕ್ಷೇತ್ರ ಪ್ರಾತ್ಯಕ್ಷಿಕೆ






ಶ್ರೀ ಸಣ್ಣನಿಂಗಪ್ಪ ಕುದರಿಹಾಳ್, ಕಾಕೋಳ ಗ್ರಾಮ, ರಾಣೇಬೆನ್ನೂರು ತಾಲೂಕು ಇವರ ಜಮೀನಿನಲ್ಲಿ ರೋಟವೇಟರ್ ಬಳಕೆಯ ಕ್ಷೇತ್ರ ಪ್ರಾತ್ಯಕ್ಷಿಕೆಯನ್ನು ದಿನಾಂಕ 29.05.09 ರಂದು ಹಮ್ಮಿಕೊಳ್ಳಲಾಗಿತ್ತು. ಈ ಪ್ರಾತ್ಯಕ್ಷಿಕೆಯಲ್ಲಿ 60ಕ್ಕೂ ಹೆಚ್ಚು ರೈತರು ಪಾಲ್ಗೊಂಡು ರೋಟವೇಟರ್‌ನ ಬಳಕೆ, ಲಭ್ಯತೆ ಮತ್ತು ಸಹಾಯ ಧನದ ಮಾಹಿತಿಯನ್ನು ಪಡೆದರು. ರೋಟವೇಟರ್‌ನ ಬಳಕೆಯಿಂದ ಕೊಯ್ಲಿನ ನಂತರ ಉಳಿಯುವ ಸಸ್ಯ ತ್ಯಾಜ್ಯಗಳನ್ನು ನೇರವಾಗಿ ನೆಲಕ್ಕೆ ಸೇರಿಸುವುದು ಹಾಗೂ ಬಿತ್ತನೆಗೆ ಅನುಕೂಲವಾಗುವಂತೆ ಹೊಲದ ತಯಾರಿಯಾಗುವುದನ್ನು ರೈತರು ವೀಕ್ಷಿಸಿದರು.

## ಸಸಿಮಡಿಗಳಲ್ಲಿ ಸೌರ್ಯ ಶಾಖೀಕರಣ


ಕಂದಕಗಳನ್ನು ತೆಗೆಯುತ್ತಿರುವುದು


ಮಟ್ಟಮಾಡುತ್ತಿರುವುದು


ಪ್ಲಾಸ್ಟಿಕ್ ಹಾಳೆ ಹಾಸುತ್ತಿರುವುದು


ತಯಾರಾದ ಸಸಿ ಮಡಿ

ತರಕಾರಿ ಬೆಳೆಗಳನ್ನು ಸಸಿಮಡಿಯಲ್ಲಿ ಬೆಳೆಸಿ ಮುಖ್ಯ ತಾಕಿನಲ್ಲಿ ನಾಟಿ ಮಾಡುವುದರಿಂದ ಸಸಿ ಮಡಿಗಳನ್ನು ಕಳೆ, ರೋಗರುಜಿನಗಳಿಂದ ಮತ್ತು ಬೇರುಗಂಟುಗಳಿಂದ ರಕ್ಷಿಸಿ, ಉತ್ತಮ ಗುಣವಟ್ಟದ ಸಸಿಗಳನ್ನು ಪಡೆಯುವುದು ಅವಶ್ಯಕ. ತರಕಾರಿ ಸಸಿ ಮಡಿಯಲ್ಲಿ ಸಾಮಾನ್ಯವಾಗಿ ಭೂಮಿಯಿಂದ ರವಾನಿಸಲ್ಪಡುವ ಸಸಿ ಕೊಳೆರೋಗ, ಕಪ್ಪು ಕೊಳೆರೋಗ, ಜಂತು ಹುಳು ಮತ್ತು ಕಳೆಗಳ ನಿಯಂತ್ರಣಕ್ಕೆ ಪ್ರತಿ ಚ.ಮೀ. ಪ್ರದೇಶಕ್ಕೆ 400 ಗ್ರಾಂ ಬೇವಿನ ಹಿಂಡಿ ಅಥವಾ 100 ಗ್ರಾಂ ಕೋಳಿ ಗೊಬ್ಬರವನ್ನು ಮಣ್ಣಿನಲ್ಲಿ ಬೆರೆಸಿ ನಂತರ 100 ಗೇಜ್ ತೆಳುವಾದ ಪಾರದರ್ಶಕ ಪ್ಲಾಸ್ಟಿಕ್ ಹಾಳೆಯೊಂದಿಗೆ 2 ವಾರಗಳ ಸೌರ್ಯಶಾಖೀಕರಣಗೊಳಿಸುವುದು ಒಂದು ಆಶಾಕಿರಣವಾಗಿ ಹೊರಹೊಮ್ಮಿದೆ.

ತೇವಾಂಶದಿಂದ ಕೂಡಿದ ಮಣ್ಣಿನ ಮೇಲೆ ತೆಳುವಾದ ಪ್ಲಾಸ್ಟಿಕ್ ಹಾಳೆಗಳ ಮೂಲಕ ಸೂರ್ಯ ರಶ್ಮಿಯನ್ನು ಹಾಯಿಸಿ ಮಣ್ಣಿನ ಉಷ್ಣಾಂಶವನ್ನು ಹೆಚ್ಚಿಸುವ ಪ್ರಕ್ರಿಯೆಯನ್ನು "ಸೌರ್ಯ ಶಾಖೀಕರಣ" ಎಂದು ಕರೆಯುತ್ತಾರೆ. ಈ ವಿಧಾನವು ರಾಸಾಯನಿಕ ವಿಧಾನವಲ್ಲದಿರುವುದರಿಂದ ಪರಿಸರ ಮತ್ತು ಕೃಷಿ ಕಾರ್ಮಿಕರನ್ನು ರಾಸಾಯನಿಕಗಳಿಂದ ದೂರ ಇರುವಂತೆ ಮಾಡಿದೆ. ಸೌರ್ಯ ಶಾಖೀಕರಣಕ್ಕೆ ಅಳವಡಿಸುವ ಭೂಮಿಯನ್ನು ಹದವಾಗಿ ಉಳುಮೆ ಮಾಡಿ ಉತ್ತಮ ಮಟ್ಟಕ್ಕೆ ಬರುವಂತೆ ಸಿದ್ಧ ಮಾಡಬೇಕು. ಇದಕ್ಕಾಗಿ ಭೂಮಿಯನ್ನು ಎರಡು ಬಾರಿ ಉಳುಮೆ ಮಾಡಿ ದಪ್ಪ ಹೆಂಟೆಗಳನ್ನು ಹೊಡೆಯಲು ಕುಂಟೆ ಅಥವಾ ಹಲುಬೆಯನ್ನು ಹಾಯಿಸಬೇಕು. ಇದರಿಂದ ಮಣ್ಣಿನ ಮೇಲ್ಪದರವು ಸಡಿಲಗೊಂಡು ಉಷ್ಣತೆಯ ರವಾನೆಗೆ ಪರವಾನಿಗೆ ನೀಡುತ್ತದಲ್ಲದೇ, ಭೂಮಿಯನ್ನು ಸಮತಟ್ಟಾಗಿಸಿ ಮಣ್ಣು ಮತ್ತು ಪ್ಲಾಸ್ಟಿಕ್ ಹಾಳೆಯ ಅಂತರವನ್ನು ಸಾಕಷ್ಟು ಕಡಿಮೆಗೊಳಿಸುತ್ತದೆ. ಮಣ್ಣಿನ ಮೇಲ್ಪದರದಲ್ಲಿ ಚೂಪಾದ ಕಲ್ಲು ಅಥವಾ ಕಡ್ಡಿಗಳು ಇರದೆ ಸಮತಟ್ಟಾದ ಮಣ್ಣಿಗೆ ಸಾಕಷ್ಟು ನೀರು ಹಾಯಿಸಬೇಕು. ನಂತರ ಪ್ಲಾಸ್ಟಿಕ್ ಹಾಳೆಯನ್ನು ಹಾಸುವ ಮಡಿಯ ಸುತ್ತ 4 ರಿಂದ 6 ಇಂಚು ಆಳವಿರುವ ಸಣ್ಣ ಕಂದಕವನ್ನು ತೆಗೆಯಬೇಕು. ತದನಂತರ ತೆಳುವಾದ ಪ್ಲಾಸ್ಟಿಕ್ ಹಾಳೆಯನ್ನು ಮಣ್ಣಿನ ಮೇಲೆ ಹಾಸಿ ನಾಲ್ಕೂ ಕಡೆಗಳಲ್ಲೂ ಬಿಗಿಯಾಗಿ ಕೂಡಿಸಿ ಕಂದಕಗಳಲ್ಲಿ ನಾಲ್ಕು ಅಂಚುಗಳನ್ನು ತೇವಾಂಶದಿಂದ ಕೂಡಿದ ಮಣ್ಣಿನಿಂದ ಮುಚ್ಚಬೇಕು. ಮುಚ್ಚುವಾಗ ಮಣ್ಣು ಮತ್ತು ಪ್ಲಾಸ್ಟಿಕ್ ಹಾಳೆಯ ನಡುವೆ ಗಾಳಿ ತುಂಬದಂತೆ ಎಚ್ಚರಿಕೆ ವಹಿಸುವುದು ಅತ್ಯವಶ್ಯಕ. ಪ್ಲಾಸ್ಟಿಕ್ ಹಾಳೆಗೆ ಯಾವುದೇ ರೀತಿಯ ಹಾನಿ ಅಥವಾ ರಂಧ್ರಗಳಾದರೆ ಆದಷ್ಟು ಬೇಗ ಪಾರದರ್ಶಕ ಅಂಟಿನ ಟೇಪ್‌ನಿಂದ ಮುಚ್ಚಬೇಕು. ಇದು ಉಷ್ಟಾಂಶವು ಹೊರಹೋಗದಂತೆ ತಡೆಯುತ್ತದೆ. ಪ್ಲಾಸ್ಟಿಕ್ ಹಾಳೆಯನ್ನು ಹಾಸಿದ ಮೇಲೆ ಹಾಳೆಯ ಮೇಲೆ ಹೆಚ್ಚು ತಿರುಗಾಡಬಾರದು. ಇದರಿಂದ ಮಣ್ಣು ಗಟ್ಟಿಯಾಗುವುದಲ್ಲದೇ ಹಾಳೆಗಳು ಸೀಳುತ್ತವೆ.



## ಮಣ್ಣು ಪರೀಕ್ಷೆಯ ಆಧಾರದ ಮೇಲೆ ರಾಸಾಯನಿಕ ಗೊಬ್ಬರಗಳ ಬಳಕೆ

ವಿವಿಧ ಬೆಳೆಗಳಿಗೆ ಕೊಡಬೇಕಾದ ರಾಸಾಯನಿಕ ಗೊಬ್ಬರಗಳ ಪ್ರಮಾಣ ಈ ಕೆಳಗಿನ ಎರಡು ಅಂಶಗಳನ್ನು ಅವಲಂಬಿಸಿರುತ್ತದೆ.

1. ಉತ್ಪಾದನೆಗಾಗಿ ಬೆಳೆ ಉಪಯೋಗಿಸಿಕೊಳ್ಳುವ, ಸಸ್ಯ ಪೋಷಕಾಂಶಗಳ ಪ್ರಮಾಣ
2. ಮಣ್ಣಿನಲ್ಲಿ ದೊರೆಯುವ ಸಸ್ಯ ಪೋಷಕಾಂಶಗಳ ಮಟ್ಟ ಅಥವಾ ಮಣ್ಣಿನ ಫಲವತ್ತತೆ.

ಹೈಬ್ರಿಡ್ ಮತ್ತು ಅಧಿಕ ಇಳುವರಿ ಕೊಡುವ ಸುಧಾರಿತ ತಳಿಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಸಸ್ಯ ಪೋಷಕಾಂಶಗಳನ್ನು ಬಳಸಿಕೊಳ್ಳುವ ಸಾಮರ್ಥ್ಯವಿದೆ. ಸಂಶೋಧನೆಯ ಅಧಾರದ ಮೇಲೆ ವಿವಿಧ ಬೆಳೆಗಳಿಗೆ ಸಾಧಾರಣ ಫಲವತ್ತತೆಯ ಸನ್ನಿವೇಶದಲ್ಲಿ ಕೊಡಬೇಕಾದ ರಾಸಾಯನಿಕ ಗೊಬ್ಬರಗಳ ಪ್ರಮಾಣವನ್ನು ನಿರ್ಧರಿಸಿ ಶಿಫಾರಸ್ಸು ಮಾಡಲಾಗಿದೆ. ಅದರೆ ಈ ಶಿಫಾರಸ್ಸುಗಳನ್ನು ಮಣ್ಣಿನ ಪರೀಕ್ಷೆಯ ಅಧಾರದ ಮೇಲೆ ಬದಲಾವಣೆ ಮಾಡಿಕೊಳ್ಳುವುದು ಅವಶ್ಯಕ.

ಮಣ್ಣಿನ ಪರೀಕ್ಷೆ ಮಾಡಿಸದೆ, ರಾಸಾಯನಿಕ ಗೊಬ್ಬರಗಳನ್ನು ಹಾಕುವುದರಿಂದ ನಾವು ಅವಶ್ಯಕತೆಗಿಂತ ಹೆಚ್ಚಿಗೆ ಹಾಕಿ, ಹಣ ಖರ್ಚು ಮಾಡುತ್ತೇವೆ ಜೊತೆಗೆ ಭೂಮಿಯ ಗುಣಮಟ್ಟವನ್ನು ಕೆಡಿಸಿಕೊಳ್ಳುತ್ತಿದ್ದೇವೆ. ಅಗತ್ಯಕ್ಕಿಂತ ಕಡಿಮೆ ಪ್ರಮಾಣದಲ್ಲಿ, ರಾಸಾಯನಿಕ ಗೊಬ್ಬರಗಳನ್ನು ಹಾಕಿದರೆ ಬೆಳೆಯ ಇಳುವರಿ ಕಡಿಮೆಯಾಗುತ್ತದೆ. ರಾಸಾಯನಿಕ ಗೊಬ್ಬರಗಳ ಬೆಲೆ ಅಧಿಕವಾಗಿರುವ ಈ ದಿನಗಳಲ್ಲಿ ಮಣ್ಣಿನ ಪರೀಕ್ಷೆಯ ಆಧಾರದ ಮೇಲೆ ಅವಶ್ಯವಿದ್ದಷ್ಟು ಗೊಬ್ಬರಗಳನ್ನು ಕೊಡುವುದು, ಇಳುವರಿ ಹಾಗೂ ಅರ್ಥಿಕ ದೃಷ್ಟಿಯಿಂದ ಒಳ್ಳೆಯ ಪದ್ಧತಿ. ಮಣ್ಣು ಪರೀಕ್ಷೆಯಿಂದ, ಮಣ್ಣಿನಲ್ಲಿನ ಲಘುಪೋಷಕಾಂಶಗಳ (ಕಬ್ಬಿಣ, ಮ್ಯಾಂಗನೀಸ್, ತಾಮ್ರ, ಸತು, ಮಾಲಿಬ್ಡಿನಂ ಮತ್ತು ಬೋರಾನ್) ಕೊರತೆ ಇದ್ದರೆ ಅವುಗಳನ್ನು ನೀಗಿಸುವ ಕ್ರಮ ತೆಗೆದುಕೊಳ್ಳಬಹುದು.

## ಆಶ್ರಯ ಗಿಡಗಳ ಹತೋಟಿ – ನಂಜಾಣು ರೋಗ ನಿರ್ವಹಣಾ ಕ್ರಮ


ಸೂರ್ಯಕಾಂತಿ ನಂಜಾಣು ರೋಗ (ನೆಕ್ರೋಸಿಸ್)


ಮೆಣಸಿನಕಾಯಿ ಗಿಡದ ನಂಜಾಣು ರೋಗ (ಮೊಸಾಯಿಕ್)


ಬಾಳೆ ಎಲೆಗುಚ್ಛ ರೋಗ (ಬಂಚಿ ಟಾಪ್)


ಪಪ್ಪಾಯ ಉಂಗುರ ಚುಕ್ಕೆ ರೋಗ (ರಿಂಗ್ ಸ್ಪಾಟ್)

ಇತ್ತೀಚಿನ ದಿನಗಳಲ್ಲಿ ಕೆಲವು ನಂಜಾಣು ರೋಗಗಳಾದ ಸೂರ್ಯಕಾಂತಿ ಬಡ್ ನೆಕ್ರೋಸಿಸ್, ನೆಲೆಗಡಲೆ ಕುಡಿ ಸಾಯುವ ರೋಗ, ಬೆಂಡೆಯಲ್ಲಿ ಹಳದಿ ಎಲೆರೋಗ, ಪಪ್ಪಾಯಿ ಉಂಗುರ ಚುಕ್ಕೆ ರೋಗ, ಬಾಳೆ ಎಲೆಗುಚ್ಚ (ಬಂಚಿ ಟಾಪ್) ನಂಜಾಣು ರೋಗಗಳು ಹೆಚ್ಚು ಮಾರಕ ಹಾಗೂ ಹಾನಿಕಾರಕ ರೋಗಗಳಾಗಿ ಪರಿಣಮಿಸಿವೆ. ಪ್ರಸ್ತುತ ಮಾರುಕಟ್ಟೆಯಲ್ಲಿ ನಂಜಾಣು ರೋಗಗಳನ್ನು ಹತೋಟಿಗೆ ತರಲು ಯಾವುದೇ ರೀತಿಯ ನಂಜಾಣು ರೋಗನಾಶಕಗಳು ಬಳಕೆಯಲ್ಲಿರುವುದಿಲ್ಲ . ನಂಜಾಣುವಿನ ವೃದ್ಧಿಗೆ ಸಹಕರಿಸಿ ರೋಗದ ತೀವ್ರತೆ ಹೆಚ್ಚುವುದರಲ್ಲಿ ಹಾಗೂ ರೋಗ ಹರಡುವಿಕೆಯಲ್ಲಿ ಪ್ರಮುಖ ಪಾತ್ರ ವಹಿಸುವ ಆಶ್ರಯ ಗಿಡಗಳ ನಿರ್ವಹಣೆ ನಂಜಾಣು ರೋಗಗಳ ಸಮಗ್ರ ಹತೋಟಿ ಕ್ರಮಗಳಲ್ಲಿ ಒಂದು ಸೂಕ್ತ ವಿಧಾನವಾಗಿದೆ. ನಂಜಾಣು ರೋಗ ಹರಡುವಿಕೆಯಲ್ಲಿ ಆಶ್ರಯ ಗಿಡಗಳು ಮಹತ್ತರ ಪಾತ್ರವಹಿಸುವುದರಿಂದ ಸದರಿ ಆಶ್ರಯ ಗಿಡಗಳ ಹತೋಟಿ ಕ್ರಮವು ಸೂಕ್ತವಾಗಿದ್ದು, ನಂಜಾಣು ರೋಗ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

### ನಂಜಾಣು ವೃದ್ಧಿ ಹಾಗೂ ಹರಡುವಿಕೆಗೆ ಸಹಕರಿಸುವ ಆಶ್ರಯ ಗಿಡಗಳು

| ಪ್ರಮುಖ ಬೆಳೆ | ರೋಗ | ರೋಗದ ವೃದ್ಧಿ ಹಾಗೂ ಹರಡುವಿಕೆಗೆ ಸಹಕರಿಸುವ ಆಶ್ರಯ ಗಿಡಗಳು/ ಕಳೆಗಳು |
|---|---|---|
| ಪಪ್ಪಾಯ | ಎಲೆ ಉಂಗುರ ಚುಕ್ಕೆ ರೋಗ | ಹತ್ತಿ, ಬದನೆ ಹಾಗೂ ಕುಂಬಳ ಜಾತಿಯ ಗಿಡಗಳು |
| ನೆಲಗಡಲೆ | ಕುಡಿಸಾಯುವ ರೋಗ | ಚೆಂಡುಹೂವು ಮತ್ತು ಟ್ರೈಪೋಲಿಯಂ ಜಾತಿ ಗಿಡಗಳು |
| ಭತ್ತ | ತುಂಗ್ರೊ ಕಜ್ಜಿ ನಂಜಾಣು ರೋಗ | ಸಾಮಾನ್ಯವಾಗಿ ಬರುವ ಕಳೆಗಳು |
| ಸೂರ್ಯಕಾಂತಿ | ಸೂರ್ಯಕಾಂತಿ ನೆಕ್ರೋಸಿಸ್ | ಪಾರ್ಥೇನಿಯಂ ಹಾಗೂ ಸಾಮಾನ್ಯ ಕಳೆಗಳು |
| ಟೊಮ್ಯಾಟೊ | ಎಲೆ ಮುಟುರು ರೋಗ | ಪಾರ್ಥೇನಿಯಂ, ಕಡ್ಲೆಮುಳ್ಳು ಮತ್ತು ಬೇದಿ ಸೊಪ್ಪು |
| ಬೆಂಡಿ | ಹಳದಿನರ ಮೊಸಾಯಿಕ್ | ದಾಸವಾಳ |
| ಬೀನ್ಸ್ | ಹಳದಿ ಮೊಸಾಯಿಕ್ | ದ್ವಿದಳ ಧಾನ್ಯಗಳು |
| ಮೆಣಸಿನಕಾಯಿ | ಎಲೆ ಮುಟುರು ರೋಗ | ಸೌತೆ, ಹೊಗೆಸೊಪ್ಪು, ಟೊಮ್ಯಾಟೊ ಮತ್ತು ಕಳೆಗಳು |